ನನಗೆ ಆಗಾಗ ವಿಶ್ರಾಂತಿ ಬೇಕು ಅನ್ನಿಸುತ್ತದೆ. ಆದರೆ ಮರುಕ್ಷಣವೇ ವಿಶ್ರಾಂತಿ ತೆಗೆದುಕೊಳ್ಳುವ ಬದಲಿಗೆ ಹೊಸ ಕಥಾವಸ್ತುವಿನ ಹುಡುಕಾಟದಲ್ಲಿ ತೊಡಗುತ್ತೇನೆ. ಸಮಯ, ಪರಿಸ್ಥಿತಿ, ಸನ್ನಿವೇಶ, ವಾತಾವರಣ, ವಯಸ್ಸು ಬದಲಾದಂತೆ ಅವುಗಳಿಗೆ ಅನುಗುಣವಾಗಿ ಕಥಾವಸ್ತುವಿನಲ್ಲಿಯೂ ಒಂದಿಷ್ಟು ಬದಲಾವಣೆಗಳು ಸಹಜವಾಗಿ ಉಂಟಾಗುತ್ತವೆ. ಯಾವುದೇ ಕಥೆಗಾರ 'ಅಪ್ಡೇಟ್' ಆಗುವುದು ತುಂಬಾ ಮುಖ್ಯ.

**◆ ನೀವು ಮಕ್ಕಳ ಕಥೆ-ಕಾದಂಬರಿಗಳು, ಪತ್ತೆದಾರಿ ಕಥೆ-ಕಾದಂಬರಿಗಳು ಸೇರಿದಂತೆ ವಿವಿಧ ಪ್ರಕಾರಗಳಲ್ಲಿ ಸಾಹಿತ್ಯ ಕೃಷಿ ಮಾಡಿದ್ದೀರಿ. ನಿಮಗೆ ತುಂಬಾ ಇಷ್ಟವಾದ ಸಾಹಿತ್ಯ 'ಪ್ರಕಾರ' ಯಾವುದು?**

'ಇಷ್ಟವಾದ ಪ್ರಕಾರ' ಅನ್ನುವುದೂ ಇದೆಯಾ? ನನಗೆ ಗೊತ್ತಿಲ್ಲ. ಒಂದು ವಿಷಯವನ್ನು ಈ ಸಂದರ್ಭದಲ್ಲಿ ನಾನು ಸ್ಪಷ್ಟಪಡಿಸಿಬಿಡುತ್ತೇನೆ. ಮಕ್ಕಳ ಅಥವಾ ಪತ್ತೇದಾರಿ ಕಥೆ-ಕಾದಂಬರಿಗಳನ್ನು ನಾನಾಗಿಯೇ ಇಷ್ಟಪಟ್ಟು ಬರೆಯಲು ಆರಂಭಿಸಿಲ್ಲ. ನಾನು ಯಾವತ್ತೂ ಬರೆದಿರದ ಮಕ್ಕಳ ಕಾದಂಬರಿಯನ್ನು ಬರೆಯಲು ಒತ್ತಾಯಿಸಿದ್ದು ಇನ್ನೊಬ್ಬ ಸಾಹಿತಿ ಮಿತ್ರ ನೀರೇಂದ್ರನಾಥ ಚಕ್ರವರ್ತಿ. ಪತ್ತೇದಾರಿ ಕಾದಂಬರಿಗಳನ್ನು ಬರೆಯುವಂತೆ ಒತ್ತಾಯ ಮಾಡಿದ್ದು, ಸಮಯದ ಮಿತಿ ಕೊಟ್ಟು ನನ್ನಿಂದ ಬರೆಯಿಸಿದ್ದು 'ಆನಂದಬಾಝಾರ್ ಪತ್ರಿಕಾ'ದ ಸಂಪಾದಕರು ಮತ್ತು ಸಂಪಾದಕೀಯ ಮಂಡಳಿ. ಅವರೆಲ್ಲರ ಒತ್ತಾಯದ ಮೇರೆಗೆ ಕುತೂಹಲಭರಿತ ಎರಡು ಪತ್ತೇದಾರಿ ಕಾದಂಬರಿಗಳನ್ನು ('ಷೆಡ ಬೆರಲ್', 'ಕಲೊ ಬೆರಲ್ ಮತ್ತು ಬಿಕೆಲೇರ್ ಮೃತ್ಯು') ಬರೆದೆ. ವಿಶೇಷವೆಂದರೆ, ಆ ಸಮಯದಲ್ಲಿ ಬೇರೆ ಯಾವುದೇ ಬಂಗಾಳಿ ಲೇಖಕರೂ ಇಂತಹ ಕಾದಂಬರಿಗಳನ್ನು ಬರೆದಿರಲಿಲ್ಲ. ಇದೇ ರೀತಿಯಲ್ಲಿ 'ಭೂತ'ದ ಕಥೆಗಳನ್ನು ಆಧರಿಸಿದ ಕಾದಂಬರಿಗಳನ್ನೂ ಬರೆದಿದ್ದೇನೆ; ಅವು ಚಲನಚಿತ್ರಗಳಾಗಿಯೂ ಹೆಸರು ಮಾಡಿವೆ. ಉದಾ: 'ಗೊಶೈಬಗನೇರ್ ಭೂತ್', 'ಗೊಯ್ನಾರ್ ಬಕ್ಷೆ, 'ಭಯ್ಯಾಮಯ್.' ಇಂತಹ ಕಥೆಗಳು ನನ್ನೊಳಗೆ ಹೇಗೆ ಹುಟ್ಟಿಕೊಳ್ಳುತ್ತವೆ ಎನ್ನುವುದರ ಬಗ್ಗೆ ಸ್ವತಃ ನನಗೂ ಅರಿವಿಲ್ಲ. ಸ್ಫೂರ್ತಿ ಬಂದಾಗ ಬರೆಯುತ್ತೇನೆ, ಅಷ್ಟೇ. ಪ್ರೌಢ ಓದುಗರಿಗಾಗಿ ಬರೆಯುವುದು ಆತ್ಮತೃಪ್ತಿ ನೀಡಿದರೆ, ಮಕ್ಕಳಿಗಾಗಿ ಬರೆಯುವುದು ನನ್ನನ್ನು ಮತ್ತೊಮ್ಮೆ ಬಾಲ್ಯಕ್ಕೆ ಕರೆದೊಯ್ಯುತ್ತದೆ.

**◆ ನಿಮ್ಮ ಕೃತಿಗಳಲ್ಲಿ ಸಕಾರಾತ್ಮಕ ಜೀವನ ತತ್ವಗಳು ಅನೇಕ ಕಡೆಗಳಲ್ಲಿ ಕಾಣಿಸಿಕೊಳ್ಳುತ್ತವೆ. ಆದರೆ ನಿಮಗೆ ಕೇಂದ್ರ ಸಾಹಿತ್ಯ ಪುರಸ್ಕಾರ ತಂದುಕೊಟ್ಟ ಕೃತಿ 'ಮಾನವಜಮಿನ್'ನಲ್ಲಿ ಆಕ್ರೋಶ, ಅಸಮಾಧಾನ ಇತ್ಯಾದಿ ವಿಷಯಗಳು ಹೆಚ್ಚಾಗಿ ಕಾಣಿಸಿಕೊಳ್ಳಲು ಕಾರಣವೇನು?**

ನಾನು ಅಧ್ಯಾತ್ಮ ಗುರು ಶ್ರೀ ಠಾಕೂರ್ ಅನುಕೂಲ್ ಚಂದ್ರರ ಅನುಯಾಯಿ. ಅವರು ಅತ್ಯಂತ ಶಕ್ತಿಶಾಲಿ ಸಕಾರಾತ್ಮಕ ಚಿಂತನೆಗಳ ಪ್ರತಿಪಾದಕರು. 'ಮನುಷ್ಯ ಯಾವತ್ತೂ ತನ್ನೊಳಗಿನ ನಕಾರಾತ್ಮಕ ಚಿಂತನೆಗಳನ್ನು ಹೊರಹಾಕಲು ಪ್ರಯತ್ನಿಸಬೇಕು ಮತ್ತು ಸಕಾರಾತ್ಮಕ ಅಂಶಗಳನ್ನೇ ತುಂಬಿಕೊಳ್ಳಲು ಪ್ರಯತ್ನಿಸಬೇಕು. ತಮ್ಮನ್ನು ತಾವು ನಿಯಂತ್ರಿಸಿಕೊಳ್ಳುವುದಕ್ಕೆ ಸಕಾರಾತ್ಮಕ ಯೋಚನೆಗಳು ಪ್ರಬಲ ಶಕ್ತಿಯನ್ನು ನೀಡುತ್ತವೆ; ಇವು ನಮ್ಮ ಬುದ್ಧಿಯನ್ನು ಸ್ಥಿಮಿತದಲ್ಲಿ ಇಟ್ಟುಕೊಳ್ಳುವುದಕ್ಕೆ ಸಹಕರಿಸುತ್ತವೆ' ಎಂದು ತಮ್ಮ ಶಿಷ್ಯರಿಗೆ ಯಾವತ್ತೂ ಉಪದೇಶ ಮಾಡುತ್ತಾರೆ. ಅವರ ಮಾತು ಅಕ್ಷರಶಃ ನಿಜ. ಆದರೆ ಮಾನವನೊಳಗಿನ ಕೆಟ್ಟ ಯೋಚನೆಗಳು, ದುಷ್ಟ ಚಿಂತನೆಗಳು ಆತನನ್ನು ಅವನತಿಯ ಕಡೆಗೆ ಎಳೆದೊಯ್ಯುತ್ತಲೇ ಇರುತ್ತವೆ. ಮನಸ್ಸಿನೊಳಗೆ ಅವಿತು ಕುಳಿತಿರುವ ಕೋಪ, ಆಕ್ರೋಶ, ಕಾಮ, ಅಸೂಯೆ, ಕ್ರೌರ್ಯ, ಇತ್ಯಾದಿ ಭಾವಗಳು ಯಾವಾಗ ಸ್ಫೋಟಗೊಳ್ಳುತ್ತವೆ ಎನ್ನುವುದನ್ನು ಊಹಿಸುವುದೂ ಸಾಧ್ಯವಿಲ್ಲ. ಮಾನವನು ಖಿನ್ನತೆಗೆ ಜಾರುವುದಕ್ಕೂ ಇಂತಹ ಭಾವನೆಗಳೇ ಮುಖ್ಯ ಕಾರಣ. ಜಗತ್ತಿನ ಅನೇಕ ಜನರು ಯಾವುದೋ ಒಂದು ಹಂತದಲ್ಲಿ ಖಿನ್ನತೆಯ ರೋಗಕ್ಕೆ ತುತ್ತಾಗುತ್ತಾರೆ. ಇತ್ತೀಚೆಗಂತೂ ಈ ರೋಗಿಗಳ ಸಂಖ್ಯೆ ಅಧಿಕವಾಗುತ್ತಿದೆ. ಸ್ವತಃ ನಾನೂ ಕೂಡ ಒಂದು ಹಂತದಲ್ಲಿ ಖಿನ್ನತೆಗೆ ಸಿಲುಕಿದವನೇ. ಖಿನ್ನತೆಯಿಂದ ಹೊರಬರದೇ ಹೋದರೆ ಜೀವನ ಸರ್ವನಾಶವಾಗುತ್ತದೆ. ಇಂತಹ ಒಂದು ಸಿದ್ಧಾಂತವನ್ನು ಇಟ್ಟುಕೊಂಡು ನಾನು 'ಮಾನವ್‌ಜಮಿನ್' ಕೃತಿಯನ್ನು ರಚಿಸಿದೆ. ನಿಜ, ಇದು ನನ್ನ ಇತರ ಕಾದಂಬರಿಗಳ ವಸ್ತುವಿಗಿಂತ ತುಂಬಾ ಭಿನ್ನವಾಗಿದೆ. ಆದರೆ ಲೇಖಕನಾದವನು